


ವಿಮಾನಗಳು ನಿಧಾನವಾಗಿ ಚಲಿಸುತ್ತಿರುವುದು ಕಾಣಿಸುತ್ತದೆ; ಇದೊಂದು ಸ್ವಾರಸ್ಯಕರ ದೃಶ್ಯ. ಸಾವಿರಾರು ವಿಮಾನಗಳು ದೊಡ್ಡ ಬೆಲ್ಲದ ಉಂಡೆಯ ಮೇಲೆ ಸುತ್ತಾಡುತ್ತಿರುವ ಚಿಕ್ಕಚಿಕ್ಕ ಇರುವೆಗಳ ತರಹ, ಕೆಲವು ಕಡೆ ದಟ್ಟವಾಗಿ, ಇನ್ನೂ ಕೆಲವು ಕಡೆ ವಿರಳವಾಗಿ ಸುತ್ತಾಡುತ್ತಿರುವಂತೆ ಕಾಣಿಸುತ್ತವೆ. ಕೆಲಕ್ಷಣ ಈ ರೋಚಕ ದೃಶ್ಯವನ್ನು ನೋಡುತ್ತಿರುವ ಹಾಗೆ, ಕಿಕ್ಕಿರಿದ ಸಂಚಾರ ದಟ್ಟಣೆ ಇರುವ ಕಡೆಗಳಲ್ಲಿಯೂ ಒಂದಷ್ಟು ಭೂಪ್ರದೇಶಗಳಲ್ಲಿ ಒಂದೂ ವಿಮಾನ ಹಾರಾಡದೇ ಇರುವುದು ಗೋಚರಿಸುತ್ತದೆ. ಏನಿದು ವಿಚಿತ್ರ?

ಹೌದು, ಈ ಭೂಪ್ರದೇಶಗಳ ಮೇಲೆ ಹಾರಾಡಲು ವಿಮಾನಗಳು ಅಂಜುತ್ತವೆ. ಇಲ್ಲಿ ವಿಮಾನ ಹಾರಾಟ ನಿಷೇಧಿತವಾಗಿರುತ್ತದೆ; ಇಲ್ಲವೇ ವಿಮಾನ ಚಾಲಕರೇ ತಮ್ಮ ಸ್ವಂತ ವಿವೇಚನೆಯಿಂದ ಈ ಪ್ರದೇಶಗಳ ಮೇಲೆ ವಿಮಾನ ಒಯ್ಯುವುದಿಲ್ಲ. ಇಂಥ ಕೆಲವು ವಿಚಿತ್ರ ಪ್ರದೇಶಗಳ ಕುರಿತು ತಿಳಿಯೋಣ.

## ಮಕ್ಕಾದ ಕಾಬಾ ಮಂದಿರ

ಜಗತ್ತಿನ ಎರಡನೇ ದೊಡ್ಡ ಧರ್ಮ ಎನಿಸಿಕೊಂಡ ಇಸ್ಲಾಮಿನ ಕೋಟಿಗಟ್ಟಲೆ ಮುಸಲ್ಮಾನರಿಗೆ ಜೀವನದಲ್ಲಿ ಒಮ್ಮೆಯಾದರೂ ಭೇಟಿ ನೀಡಬೇಕೆಂಬ ನಿಯಮವಿರುವ ಪವಿತ್ರ ತಾಣ ಕಾಬಾ ಮಂದಿರ. ಇದು ಸೌದಿ ಅರೇಬಿಯಾದ ಮಕ್ಕಾ ನಗರದಲ್ಲಿದೆ. ಹಜ್ (ಮತ್ತು ಉಮ್ರಾ) ಯಾತ್ರೆ ಸಲುವಾಗಿ ಪ್ರತಿವರ್ಷ ಸರಾಸರಿ 20 ಲಕ್ಷ ಜನ ಇಲ್ಲಿಗೆ ಭೇಟಿ ಕೊಡುತ್ತಾರೆ. ಆದರೂ ಮಕ್ಕಾ ನಗರದಲ್ಲಿ ವಿಮಾನ ನಿಲ್ದಾಣವಿಲ್ಲ. ಮಕ್ಕಾಗೆ ಬರಲು ಇರುವ ಅತ್ಯಂತ ಹತ್ತಿರ ವಿಮಾನ ನಿಲ್ದಾಣವೆಂದರೆ, 76 ಕಿ.ಮೀ. ದೂರವಿರುವ ತೈಫ್ ಏರ್‌ಪೋರ್ಟ್ ಮತ್ತು ಜೆದ್ದಾ ಕಿಂಗ್ ಅಬ್ದುಲ್ ಅಜೀಜ್ ಇಂಟರ್‌ನ್ಯಾಷನಲ್ ಏರ್‌ಪೋರ್ಟ್. ಅಲ್ಲಿಂದ ಯಾತ್ರಿಗಳು ರಸ್ತೆ ಮಾರ್ಗವಾಗಿಯೇ ಮಕ್ಕಾ ತಲುಪಬೇಕು.

ಮಕ್ಕಾ ನಗರದ ಮೇಲೆ ವಿಮಾನಗಳು ಹಾರಾಡದೇ ಇರಲು ಕಾರಣವೇನು? ಇದಕ್ಕೆ ಉತ್ತರವಾಗಿ ಎರಡು ಬಗೆಯ ಸಿದ್ಧಾಂತಗಳಿವೆ. ಒಂದನೆಯದು, ಧಾರ್ಮಿಕ ನಂಬಿಕೆಗೆ ಸಂಬಂಧಿಸಿದ್ದು. ಮುಸ್ಲಿಮರ ನಂಬಿಕೆ ಪ್ರಕಾರ ಸ್ವರ್ಗವು ಆಕಾಶದಲ್ಲಿ, ನೇರವಾಗಿ ಕಾಬಾದ ಮೇಲೆ ಸ್ಥಿತವಾಗಿದೆ. ವಿಮಾನಗಳು ಇವುಗಳ ನಡುವೆ ಹಾರಾಡುವುದರಿಂದ ಈ ನಂಬಿಕೆಗೆ ಅಪಚಾರವಾಗುತ್ತದೆ.

ಇನ್ನೊಂದು ನಂಬಿಕೆ ಪ್ರಕಾರ, ಇಸ್ಲಾಮಿನ ಪವಿತ್ರ ಆದಿ ಮಂದಿರ ಕಾಬಾ, ಭೂಮಿಯ ಗುರುತ್ವಾಕರ್ಷಣೆಯ ಕೇಂದ್ರ ಬಿಂದುವಿನಲ್ಲಿದೆ. ಇನ್ನೊಂದು ರೀತಿ ಹೇಳುವುದಾದರೆ, ಭೂಗೋಳದ ಉತ್ತರ ಮತ್ತು ದಕ್ಷಿಣ ಧ್ರುವಗಳ ನಟ್ಟನಡುವೆ ಇದೆ. ಈ ಕಾರಣಕ್ಕಾಗಿ ಭೂಕಾಂತೀಯ ಶಕ್ತಿಯ ವೈಪರೀತ್ಯದಿಂದಾಗಿ ಇಲ್ಲಿ ವಿಮಾನದಲ್ಲಿ ವ್ಯಾಪಕವಾಗಿ ಬಳಸಲಾಗುವ ಎಲೆಕ್ಟ್ರೊಮ್ಯಾಗ್ನೆಟಿಕ್ ಉಪಕರಣಗಳು ನಿಖರವಾಗಿ ಕೆಲಸ


ಭೂಗೋಳದ ಉತ್ತರ ಮತ್ತು ದಕ್ಷಿಣ ಧ್ರುವಗಳ ನಟ್ಟನಡುವೆ ಮಕ್ಕಾದ ಕಾಬಾ ಮಂದಿರ


ಪರ್ವತಗಳಿಂದ ಆವೃತವಾಗಿರುವ ಹಿಮಾಲಯ ಪ್ರಸ್ಥಭೂಮಿ ಮೇಲೂ ವಿಮಾನ ಹಾರುವುದಿಲ್ಲ